# ‘ತಮಂಧದ ಕೇಡು’ ಕಥೆಯಲ್ಲಿ ಚಿತ್ರಣಗೊಂಡಿರುವ ಸಾಮಾಜಿಕ ವ್ಯವಸ್ಥೆ

**ಮಾದಪ್ಪ ಜಿ.**

ಉಪನ್ಯಾಸಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಮಡಿಕೇರಿ.

**Received: 15/10/2024 ; Acepted: 01/11/2024 ; Published: 30/11/2024**

**DOI: https://doi.org/10.5281/zenodo.14246486**

## ABSTRACT:

ಭಾರತೀಯ ಸಾಮಾಜಿಕ ವ್ಯವಸ್ಥೆಯು ಬಹುತ್ವದ ನೆಲೆಯಿಂದ ಕೂಡಿದೆ. ಶೋಷಣೆಗೊಳಗಾದವರ ನೋವು, ಆಕ್ರೋಶ, ಸಂವೇದನೆಗಳನ್ನು ಪ್ರತಿಭಟನೆ, ಹೋರಾಟದ ಮೂಲಕ ಅಭಿವ್ಯಕ್ತಿಸುವ ಬಂಡಾಯ ಸಾಹಿತ್ಯ ಪಂಥದ ಆರಂಭಿಕ ಕಥೆಗಳು ಸಿಟ್ಟು, ಅವಮಾನ, ಹತಾಶೆ, ಆಕ್ರೋಶಗಳನ್ನು ರೋಷಾವೇಶದ ಭಾಷೆಯಲ್ಲಿಯೇ ಹೊರಹಾಕಿದೆ. ಈ ಕಾಲಘಟ್ಟದಲ್ಲಿ ಕಂಡುಬರುವ ಅಮರೇಶ ನುಗಡೋಣಿ ತಮ್ಮ ಕಥೆಗಳಲ್ಲಿ ಸಾಮಾಜಿಕ ಕಳಕಳಿ, ರಾಜಕೀಯಪ್ರಜ್ಞೆ ಹಾಗೂ ಪ್ರತಿಭಟನೆಯ ಮೂಲಕ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದ್ದಾರೆ. ಹಾಗೂ ತಮ್ಮ ಕಥೆಗಳಲ್ಲಿ 12ನೇ ಶತಮಾನದ ಬಸವಣ್ಣನ ಕಾಯಕ ವೃತ್ತಿಯ ಸಮಸಮಾಜದ ಕನಸಿನ ಸಮಾಜವನ್ನು ಮರುನಿರ್ಮಾಣ ಮಾಡಲು ಪ್ರಯತ್ನಿಸಿದ್ದಾರೆ.

ದೇವನೂರು ಮಹಾದೇವ ಅವರ ಕಥೆಗಳನ್ನು ನೆನಪಿಸುವ ಇವರ ಕಥೆಗಳು ಅಲ್ಲಿನ ಪಾತ್ರಗಳಂತೆ ತಾತ್ವಿಕವಾಗಿ ಪ್ರತಿಭಟಿಸುವುದಿಲ್ಲ; ಮೃದುಧೋರಣೆಯಲ್ಲಿ ಸಾತ್ವಿಕವಾಗಿ ಸಾಗುತ್ತ ಶೋಷಣೆಯನ್ನು ಪರಂಪರಾಗತ ಸಂಪ್ರದಾಯ ಎನ್ನುವಂತೆ ಒಪ್ಪಿಕೊಂಡಿವೆ. ‘ತಮಂಧದ ಕೇಡು’ ಕಥೆಯ ನಾಯಕ ಚೆನ್ನಮಲ್ಲಯ್ಯ ಉರುಫ್ ಚೆನ್ನ. ಕಥಾನಾಯಕಿ ಅಕ್ಕಮಹಾದೇವಿ ಉರುಫ್ ‘ಅಕ್ಕ’. ಈ ಎರಡು ಹೆಸರುಗಳು, ಕಥೆಗಾರರು ದೇಮ ಅವರಿಂದ ಪ್ರೇರಿತವಾಗಿರುವುದನ್ನು ಹಾಗೂ 12ನೇ ಶತಮಾನದ ಶರಣ ಚಳವಳಿಯಿಂದ ಪ್ರಭಾವಿತರಾಗಿರುವುದನ್ನು ಕಂಡರಿಸುತ್ತವೆ.

ಪ್ರತಿಭಟನಾತ್ಮಕ ಸಂಘರ್ಷ ಮತ್ತು ಸಾತ್ವಿಕ ಸಿಟ್ಟನ್ನು ಇಡೀ ಕಥೆಯಲ್ಲಿ ತರುವ ಮೂಲಕ ಅಮರೇಶ ನುಗಡೋಣಿ ದಲಿತ ಮತ್ತು ಲಿಂಗಾಯತ ಸಮುದಾಯದ ಸಾಮರಸ್ಯವನ್ನು ದುರುಗಾ ಮತ್ತು ಶಾಂತಗೌಡ ಪಾತ್ರಗಳ ಮೂಲಕ ಕಟ್ಟಿಕೊಡುತ್ತಲೇ ಚೆನ್ನ ಮತ್ತು ಅಕ್ಕಮಹಾದೇವಿ ಪಾತ್ರಗಳ ಮೂಲಕ ಜಾತಿ ವಿನಾಶದಂತ ಕ್ರಾಂತಿಯನ್ನು ಆಹ್ವಾನಿಸಿರುವುದು ಕಥೆಯನ್ನು ಗಟ್ಟಿಗೊಳಿಸುತ್ತದೆ.

## KEYWORDS:

ಕಥಾ ಸಾಹಿತ್ಯ, ಸಂಘರ್ಷ, ದೇವನೂರ ಮಹಾದೇವ, ತಮಂಧದ ಕೇಡು, ಗ್ರಾಮೀಣ ಸಮಾಜ.

ಭಾರತೀಯ ಸಾಮಾಜಿಕ ವ್ಯವಸ್ಥೆಯು ಬಹುತ್ವದ ನೆಲೆಯಿಂದ ಕೂಡಿದೆ. ಶತಮಾನಗಳಿಂದಲೂ ಪರಂಪರಾಗತವಾಗಿ ರೂಢಿಯಲ್ಲಿ ಬಂದ ಅನೇಕ ಸಾಮಾಜಿಕ ವಿಷಯಗಳಾದ ಧರ್ಮ, ವರ್ಗ, ಜಾತಿ, ವರ್ಣ; ಆ ಮೂಲಕ ಹುಟ್ಟಿಕೊಂಡ ಸಾಮಾಜಿಕ–ಸಾಂಸ್ಕೃತಿಕ ಸಂಘರ್ಷ, ತಾರತಮ್ಯ ಬೇಧ–ಭಾವನೀತಿ, ಮೇಲು–ಕೀಳು, ಬಡತನ, ಹಸಿವು, ದಾರಿದ್ರ್ಯ, ಶೋಷಣೆ; ಇವುಗಳ ನಿಯಂತ್ರಣಕ್ಕಾಗಿ ರೂಪುಗೊಂಡ ಸಂಪ್ರದಾಯ, ಆಚರಣೆ, ನಂಬಿಕೆ ಮತ್ತು ಮೂಢನಂಬಿಕೆ, ಅಸ್ಪೃಶ್ಯತಾಚರಣೆ, ಲಿಂಗತಾರತಮ್ಯ ನೀತಿಗಳು – ಇವೇ ಮೊದಲಾದವು ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಮೇಲೆ ಗಾಢವಾದ ಪರಿಣಾಮ ಬೀರಿದ್ದು; ಇಂಥ ಸಾಮಾಜಿಕ–ಸಾಂಸ್ಕೃತಿಕ ಶಾಪ ವಿಮೋಚನೆಗೆ ಕಥಾಪ್ರಕಾರವು ಪ್ರಭಾವಶಾಲಿ ಅಸ್ತ್ರವಾಗಿ ರೂಪುಗೊಂಡಿದೆ.

ಬಹುತ್ವ ಭಾರತದ ಸಾಮಾಜಿಕ ವ್ಯವಸ್ಥೆಯು ತೀರಾ ಸಂಕೀರ್ಣವಾಗಿದ್ದು; ಇಲ್ಲಿನ ಸಮಾಜವು ಭಿನ್ನ ಬಗೆಯ ವೈರುಧ್ಯಗಳನ್ನು ತನ್ನ ಒಡಲೆಂಬ ಅಂತರಂಗದಲ್ಲಿ ತುಂಬಿಕೊಂಡು; ವರ್ಗತಾರತಮ್ಯ ಭಾವದಿಂದ ಶ್ರಮಿಕ ಜಗತ್ತಿನ ಶುದ್ಧಾತ್ಮವನ್ನು ಹಲಬಗೆಯಲ್ಲಿ ಘಾಸಿಗೊಳಿಸಿದೆ. ಜಾತಿಪದ್ಧತಿ, ವರ್ಣವ್ಯವಸ್ಥೆ ಮತ್ತು ಆರ್ಥಿಕ ಅಸಮಾನತೆಯು ಮನುಷ್ಯನನ್ನು ಪ್ರತ್ಯೇಕ–ಪ್ರತ್ಯೇಕವಾಗಿ ವಿಂಗಡಿಸುತ್ತಾ ಬಂದಿದೆ. ಇಂಥ ಸಂದಿಗ್ಧ ಪರಿಸ್ಥಿತಿಯನ್ನು ಸಾಮರಸ್ಯದಿಂದ ಕೂಡಿಸುವ ಸಾಧ್ಯತೆ ಸಾಹಿತ್ಯಕ್ಕೆ ಮಾತ್ರವೇ ಇದೆ.

ಶೋಷಣೆಗೊಳಗಾದವರ, ಕೆಳವರ್ಗದವರ ನೋವು, ಆಕ್ರೋಶ, ಸಂವೇದನೆಗಳನ್ನು ಪ್ರತಿಭಟನೆ ಮತ್ತು ಹೋರಾಟದ ಮೂಲಕ ಅಭಿವ್ಯಕ್ತಿಸುವ ಬಂಡಾಯ ಸಾಹಿತ್ಯ ಪಂಥದ ಆರಂಭಿಕ ಕಥೆಗಳು ಸಿಟ್ಟು, ಅವಮಾನ, ಹತಾಶೆ, ಆಕ್ರೋಶಗಳನ್ನು ರೋಷಾವೇಶದ ಭಾಷೆಯಲ್ಲಿಯೇ ಹೊರಹಾಕಿರುವುದು ಕಾಲದ ಗುಣವೆಂದರೆ ತಪ್ಪಾಗಲಾರದು. ಈ ಪಂಥದಲ್ಲಿ ಪ್ರಮುಖವಾಗಿ ಕುಂ. ವೀರಭದ್ರಪ್ಪ, ಬರಗೂರು ರಾಮಚಂದ್ರಪ್ಪ, ಬೆಸಗರಹಳ್ಳಿ ರಾಮಣ್ಣ, ಬೊಳುವಾರು ಮಹಮ್ಮದ್ ಕುಂಞ, ಫಕೀರ್ ಮಹ್ಮದ್ ಕಟ್ಪಾಡಿ, ಬಿ. ಎಂ. ಬಷೀರ್, ರಫೀಕ್, ಅಬ್ದುಲ್ ರಜೀದ್ ಮೊದಲಾದ ಕಥೆಗಾರರು ತಮ್ಮ ಕಥೆಗಳಲ್ಲಿ ಸಾಮಾಜಿಕ ಕಳಕಳಿ, ಜನಪರ ಧೋರಣೆ, ರಾಜಕೀಯಪ್ರಜ್ಞೆ ಹಾಗೂ ಪ್ರತಿಭಟನೆಯ ಮೂಲಕ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದ್ದಾರೆ. ಇವರ ಪರಂಪರೆಗೆ ಅಮರೇಶ ನುಗಡೋಣಿ ಅವರು ಸೇರುತ್ತಾರೆ. ಇವರು ತಮ್ಮ ಕಥೆಗಳಲ್ಲಿ 12ನೇ ಶತಮಾನದ ಬಸವಣ್ಣನ ಕಾಯಕವೃತ್ತಿಯ ಸಮಸಮಾಜದ ಕನಸಿನ ಸಾಮಾಜಿಕ ವ್ಯವಸ್ಥೆಯನ್ನು ಮರುನಿರ್ಮಾಣ ಮಾಡಲು ಪ್ರಯತ್ನಿಸಿರುವುದು ಕಂಡುಬರುತ್ತದೆ.

ದಲಿತ ಬಂಡಾಯ ಕಥೆಗಳು ಸಿಟ್ಟು, ರೊಚ್ಚು, ಆಕ್ರೋಶ, ಈರ್ಷೆ ಹಾಗೂ

ಪ್ರತಿಭಟನೆಯಿಂದ ಕೂಡಿವೆ ಎಂಬುದನ್ನು ಈಗಾಗಲೇ ತಿಳಿಸಲಾಗಿದೆ. ಹಾಗಾಗಿ ಅನ್ಯಾಯ, ಶೋಷಣೆಗೊಳಗಾದವರ ಸಹನೆಯ ಕಟ್ಟೆ ಒಡೆದು ಶೋಷಕರ ವಿರುದ್ಧ ಪ್ರತಿಭಟಿಸುವ ತಮ್ಮ ದುಃಖ-ನೋವುಗಳನ್ನು ವ್ಯಕ್ತಗೊಳಿಸುವ ಅಂಶಗಳಿದ್ದರೂ ಬಂಡಾಯ ಕಥೆಗಾರರ ಪ್ರತಿಭಟನಾ ಮನೋಧರ್ಮ ವಿಶಿಷ್ಟವಾದುದಾಗಿದೆ. ಈ ಕುರಿತು "ಇದುವರೆಗಿನ ನಮ್ಮ ಸಾಹಿತ್ಯದಲ್ಲಿ ಪ್ರತಿಭಟನೆಯ ಅಂಶಗಳಿದ್ದುದೇ ಹೊರತು ಪ್ರತಿಭಟನೆಯನ್ನೇ ಒಂದು ಮೌಲ್ಯವೆಂದು ಒಪ್ಪಿಕೊಂಡ ಪ್ರತಿಭಟನಾ ಸಾಹಿತ್ಯವೆಂಬುದು ಇರಲಿಲ್ಲ" ಎಂಬ ಜಿ.ಎಸ್.ಎಸ್. ಅವರ ಮಾತು ಔಚಿತ್ಯ ಪೂರ್ಣವಾಗಿ ಕಂಡುಬರುತ್ತದೆ.

ದಲಿತ ಸಂವೇದನೆಯ ಹಿನ್ನೆಲೆಯಲ್ಲಿ ಕಥೆ ನಿರೂಪಿಸುವ ಕಥೆಗಾರ ಅಮರೇಶ ನುಗಡೋಣಿ. ರಾಯಚೂರು ಹಾಗೂ ಸುತ್ತಮುತ್ತಲಿನ ಗ್ರಾಮ್ಯ ಪರಿಸರದ ನೈಜ ಘಟನೆಗಳನ್ನೆ ತಮ್ಮ ಕಥಾ ವಸ್ತುವಾಗಿಸಿಕೊಂಡು ಬರೆವ ನುಗಡೋಣಿ ಅವರ ಕಥನ ಶೈಲಿ ಗ್ರಾಮ್ಯ ಭಾಷೆಯ ಮೇಲೆ ನಿರೂಪಿತವಾಗಿದೆ. 1994ರ 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಈ 'ತಮಂಧದ ಕೇಡು' ಕಥೆಯು ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟಗೊಂಡಿತು. ಅನಂತರ 1997ರಲ್ಲಿ ಕೃತಿ ರೂಪದಲ್ಲಿ ಮುದ್ರಣಗೊಂಡು; ಇದೇ ಹೆಸರಿನಲ್ಲಿ ಕಥಾಸಂಕಲನವಾಗಿ ಪ್ರಕಟವಾಯಿತು. 2016ರಲ್ಲಿ ಇದು ಮೂರನೇ ಮುದ್ರಣಗೊಂಡು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

ನುಗಡೋಣಿ ಅವರ ಕಥೆಗಳು ದೇವನೂರು ಮಹಾದೇವ ಅವರ ಕಥೆಗಳನ್ನು ನೆನಪಿಸುತ್ತವೆ. ಆದರೆ ದೇವನೂರರ ಕಥೆಗಳಲ್ಲಿರುವಂತೆ ಇಲ್ಲಿನ ಪಾತ್ರಗಳು ತಾತ್ವಿಕವಾಗಿ ಪ್ರತಿಭಟಿಸುವುದಿಲ್ಲ; ಮೃದುಧೋರಣೆಯಲ್ಲಿ ಸಾತ್ವಿಕವಾಗಿ ಸಾಗುತ್ತವೆ ಮತ್ತು ಶೋಷಣೆಯನ್ನು ಪರಂಪರಾಗತ ಸಂಪ್ರದಾಯವೆನ್ನುವಂತೆ ಒಪ್ಪಿಕೊಂಡಿವೆ. 'ತಮಂಧದ ಕೇಡು' ಕಥೆಯ ನಾಯಕ ಚೆನ್ನಮಲ್ಲಯ್ಯ ಉರುಫ್ ಚೆನ್ನ. ಕಥಾನಾಯಕಿ ಅಕ್ಕಮಹಾದೇವಿ ಉರುಫ್ 'ಅಕ್ಕ'. ಈ ಎರಡು ಹೆಸರುಗಳು, ಕಥೆಗಾರರು ದೇಮ ಅವರಿಂದ ಪ್ರೇರಿತವಾಗಿರುವುದನ್ನು ಹಾಗೂ 12ನೇ ಶತಮಾನದ ಶರಣ ಚಳವಳಿಯಿಂದ ಪ್ರಭಾವಿತರಾಗಿರುವುದನ್ನು ಕಂಡರಿಸುತ್ತವೆ. ಅಲ್ಲದೆ ಇದೇ ಕಥೆಯ ನಾಗಮ್ಮ, ಬಸಪ್ಪ, ರುದ್ರಮ್ಮ ಹೆಸರುಗಳು ಶರಣ ಚಳುವಳಿಯ ವಚನಕಾರ್ತಿಯರನ್ನು ನೆನಪಿಸುತ್ತವೆ.

ಶಾಂತಗೌಡನು ದಲಿತ ಸಮುದಾಯದ ದುರುಗನಿಗೆ ಮನೆಕಟ್ಟಿಕೊಡುವ ಭರವಸೆ ಕೊಡುವ ಮೂಲಕ ಶುರುವಾದ ಶೋಷಣೆ ದುರುಗನ ಹೆಂಡತಿ ಚೆಂದವ್ವನ ಚೆಲುವಿಗೆ ಸೋತು, ಅವಳು ಹಾಡುವ ಪದಗಳಿಗೆ ಮರುಳಾದವನಂತೆ ಅವಳ ಶೀಲಕ್ಕೆ

ಕೈಹಾಕಿ ದುರುಗನ ಸಂಸಾರಕ್ಕೆ ಖಳನಾಯಕನಾಗುತ್ತಾನೆ. ದುರುಗನ ಮಗ ಚೆನ್ನಮಲ್ಲಯ್ಯ ಅಲಿಯಾಸ್ ಚೆನ್ನ ತನ್ನ ವಿವೇಕ ಮತ್ತು ಬದ್ಧತೆಯಿಂದ ಉತ್ತಮ ಶಿಕ್ಷಣ ಪಡೆದು ತನ್ನ ತಂದೆಯ ಶ್ರಮಕ್ಕೆ ಪ್ರತಿಫಲಕೊಡುತ್ತಾನೆ. ಶಾಂತಗೌಡನ ಮಗಳು ಅಕ್ಕಮಹಾದೇವಿ ಓದುತ್ತಿದ್ದ ಶಾಲೆಯಲ್ಲಿ ಶಾಲಾ ಶಿಕ್ಷಕನಾಗಿದ್ದರಿಂದ ಅನಿರೀಕ್ಷಿತವಾಗಿ ಇಬ್ಬರ ನಡುವೆ ಪ್ರೇಮವೇರ್ಪಡುತ್ತದೆ. ಈ ಪ್ರೇಮ ಪ್ರಸಂಗವೇ ಕಥಾವಸ್ತು. ಇದು ಶಾಂತಗೌಡ ಮತ್ತು ಅವನ ಪರಿವಾರಕ್ಕೆ ನುಂಗಲಾರದ ತುತ್ತಾಗುತ್ತದೆ.

ಯಾವುದೇ ಪ್ರತಿಭಟನೆಯಿಲ್ಲದೆಯೇ ದುರುಗನ ಹೆಂಡತಿ ಚೆಂದವ್ವಳು ಶಾಂತಗೌಡನ ವಶವಾದದ್ದು ಇಲ್ಲಿ ಮುಖ್ಯವಾಗುವುದೇ ಇಲ್ಲ. ಆದರೆ ಊರಿನ ಗೌಡನಾದ ಕಾರಣ, ಶಾಂತಗೌಡನ ಮಗಳು ಅಕ್ಕಮಹಾದೇವಿ ದಲಿತನಾದ ದುರುಗನ ಚೆನ್ನನೊಂದಿಗೆ ಪ್ರೀತಿಯಲ್ಲಿ ಬಿದ್ದಿದ್ದು ಹೆಚ್ಚು ಮಹತ್ವ ಪಡೆದುಕೊಳ್ಳುತ್ತದೆ. ಸ್ವತಃ ಅಕ್ಕಮಹಾದೇವಿಯೇ ತನ್ನ ತಂದೆಯೊಡನೆ ಊರಿಗೆ ಹಿಂದಿರುಗುವುದರ ಬಗ್ಗೆ ಮಾತನಾಡುವುದು ಶಾಂತಗೌಡನಿಗೆ ನಿದ್ದೆಗೆಡಿಸುತ್ತದೆ.

ವಿದ್ಯೆಯ ಪ್ರಯೋಜನ ಪಡೆದು ಅಕ್ಕಮಹಾದೇವಿಯ ಪ್ರೀತಿಯನ್ನು ಸಂಪಾದಿಸುವ ಚೆನ್ನನ ಪಾತ್ರ ಕುರಿತು ಎಚ್.ಎಸ್. ರಾಘವೇಂದ್ರರಾವ್ ಅವರ "ಬಡತನದ ನಡುವೆಯೂ ಪ್ರೀತಿ ಹಾಗೂ ವಿವೇಕಗಳನ್ನು ಜೀವಂತವಾಗಿಟ್ಟುಕೊಳ್ಳುವ ದಲಿತರು ಪರಿಹಾರ ಮತ್ತು ಭರವಸೆಗಳನ್ನು ತುಂಬಿಕೊಳ್ಳುತ್ತಾರೆ" ಎಂಬ ಮಾತುಗಳು ಕಥೆಯ ಹಿನ್ನೆಲೆಯಲ್ಲಿ ಮಹತ್ವ ಪಡೆದುಕೊಳ್ಳುತ್ತದೆ. ಜಾತಿ ಮತ್ತು ಶೋಷಣೆಯ ತಮಂಧದ ಕೇಡಿಗೆ ಶಿಕ್ಷಣವೇ ಮದ್ದು ಎಂಬುದು ಕತೆಯ ಅಂತ್ಯದಲ್ಲಿ ಗೋಚರವಾಗುವುದು ದಲಿತರಿಗೆ ಒದಗಿದ ಶಿಕ್ಷಣದಿಂದ ಸಾಧ್ಯವಾಗಿದೆ ಎಂಬುದಕ್ಕಿಂತಲೂ ಮೇಲ್ವರ್ಗದವರ ದರ್ಪ, ದಬ್ಬಾಳಿಕೆ, ಜಾತೀಯತೆ, ಅಸ್ಪೃಶ್ಯತಾಚರಣೆಯಂಥ ಮನದ ಅಂಧಕಾರಕ್ಕೆ ದಲಿತನೋರ್ವ ತಾನು ಶ್ರಮಪಟ್ಟು ಜೀವನದ ಎಡರು ತೊಡರುಗಳನ್ನು ಮೆಟ್ಟಿನಿಂತು ಯಾವ ಊರ ಗೌಡನ ಮನೆಯಲ್ಲಿ ಅಪ್ಪ ಜೀತಕ್ಕಿದ್ದನೋ ಅದೇ ಮನೆಯ ಮಗಳನ್ನು ಪ್ರೀತಿಸಿ ಮದುವೆಯಾಗಲು ಸಿದ್ಧನಾಗಿದ್ದುದು ಮತ್ತು ಅದಕ್ಕಾಗಿ ಅಕ್ಕಮಹಾದೇವಿಯ ಪ್ರಯತ್ನ ಮುಂದುವರೆದಿದ್ದು 12ನೇ ಶತಮಾನದ ಬಸವಣ್ಣ ರೂಪಿಸಿದ ವಚನ ಚಳವಳಿಯ ಸಂದರ್ಭವನ್ನು ನೆನಪಿಸುತ್ತದೆ.

ದುಸ್ವಪ್ನದ ಮೂಲಕ ಪ್ರಾರಂಭಗೊಳ್ಳುವ ತಮಂಧದ ಕೇಡು ಕತೆಯ ದುರುಗನಿಗೆ ಇರುವುದು ಒಂದೇ ಚಿಂತೆ. ಅದು ಮಗ ಚೆನ್ನ ತಂದೊಡ್ಡಿದ ಸಂಕಟ. ಕನಸೆಂದು ಚಿತ್ರಿಸಿರುವ ದುರುಗನ ಮನಸ್ಥಿತಿಯು ವ್ಯವಸ್ಥೆಯ ವ್ಯಂಗ್ಯವಾಗಿ ಕಂಡುಬರುತ್ತದೆ. ಈ ಕತೆಯಲ್ಲಿ ಶೋಷಣೆಯು ಮೃದುತ್ವ ಹೊಂದಿದೆ. ದುರುಗನು

ಕಂಡಂತಹ ಕನಸಿನಲ್ಲಿ "ಅಕ್ಕಮ್ಮ ಇದೇ ಮನ್ಯಾಗ ತನ್ಗ ಊಟ ನೀಡಿದಂಗ! ಆಕಿ ಇದೇ ಮನ್ಯಾಕಿ ಆದಂಗಿತ್ತು! ನೆನೆ ನೆನೆಸಿಗಂಡು, ಯಪ್ಪ, ಎಲ್ಲಿ ನಿನ್ನಾಟ! ಬಲ್ಲವರಾರು" ಎಂದು ಕತೆಗಾರರು ಚಿತ್ರಿಸಿರುವುದರಲ್ಲಿ ದಲಿತರ ಒಂದಷ್ಟು ಪರಿವರ್ತನಶೀಲ ಬದಲಾವಣೆಯನ್ನು ಕಾಣಬಹುದು.

ಶೋಷಣೆ ಮತ್ತು ಭೇದ ಸಂಸ್ಕೃತಿಯನ್ನು ಮೇಲ್ವರ್ಗದವರು ತಲೆ ತಲೆಮಾರುಗಳಿಂದ ಸಂಪ್ರದಾಯವೆಂಬಂತೆ, ಹಕ್ಕು ಎಂಬಂತೆ ರೂಢಿಸಿಕೊಂಡು ಬಂದಿರುವುದನ್ನು ಬಸ್ವಣ್ಣ ದೇವರು ಗುಡಿ ಪೂಜಾರಿ ಬೂದೆಣ್ಣ "ಜಾಸ್ತಿ ಓದ್ಕೆಂಡ್ರ ತಲೆ ಬರಾಬರಿ ಇರಂಗಿಲ್ಲಂತಾರಲ್ಲ ಅದು ಸುಳ್ಳಲ್ಲ. ಅಕ್ಕಮ್ಮನನ್ನೆ ಮದ್ವಿ ಮಾಡ್ಕೊಂತೀನಿ" ಎಂಬ ಮಾತು, "ನೋಡು ದುರುಗಾ ಎಲ್ಲಿ ಊರಿವ ಕೊಳ್ಳಿ ಅಲ್ಲೇ ಉರುದ್ರ ಚಂದ! ಒಲ್ಯಾಗ ಊರಿವ ಕೊಳ್ಳಿ ಒಲೆ ಬುಟ್ಟು ಬ್ಯಾರೆ ಕಡೆ ಊರಿಯಾಕ್ ಹತ್ತಿತಂದ್ರ ಏನಾದೀತು?" ಎಂಬ ಕಟುವಾದ ಮಾತುಗಳಲ್ಲಿ ಸಮಾನತೆಯ ವಿರೋಧಿ ನಿಲುವುಗಳನ್ನು ಕಾಣಬಹುದು.

ಶಾಂತಗೌಡನ ಸೂಚನೆಯಂತೆ ಬಾಣ್ಣಿ ಮಾಡಿಸಲು ಬಸ್ಸಪ್ಪನ ಬಳಿಗೆ ದುರುಗನು ಬಂದಾಗ ಅದೇ ಸಮಯವನ್ನು ಅತ್ಯಂತ ಸೂಕ್ಷ್ಮವಾಗಿ ಬಳಕೆಮಾಡಿಕೊಂಡ ಬಸ್ಸಪ್ಪ "ಅಲ್ಲ ದುರುಗಣ್ಣ, ಈ ನಮ್ಮ ಗೌಡುಗ ಏಟು ಆಸೆಯಿದ್ದಿತು. ಒಂದೇ ಹೆಣ್ಣು ಐತೆ, ಅದು ಕೊಟ್ಟು ಮನಿಗೆ ಹೋಗದು! ಗಂಡಿಲ್ಲ! ಆಸೆ ನೋಡಿದ್ರೆ ಬೆಟ್ಟದಂಗ...! ಅಲ್ಲ ಒಂದು ವ್ಯಾಳ್ಯೆ ನಾಕೈದು ಗಂಡು ಹುಟ್ಟಿದ್ರ ಹೆಂಗ ಮಾಡ್ತಿದ್ದನೊ!" ಎನ್ನುತ್ತಲೇ ಪದೇ ಪದೇ ಇದೇ ಮಾತು ಕೇಳಿ ಹೈರಾಣಾಗಿದ್ದ ದುರುಗನಿಗೆ "ನಿನ್ನ ಮಗ ಬಾದ್ದೂರ! ಓದಿಕೊಂಡದ್ದು ಸಾರ್ಥಕವಾಯ್ತು. ನೋಡು. ಅಲ್ಲ, ನಡಿಲಿ ಬಿಡಲಿ ಆ ಮಾತು ಬ್ಯಾರೆ ಅಕ್ಕಮ್ಮ.... ಅದೇ ಸಣ್ಣಗೌಡಸಾನಿ ನಮ್ಮ ಚೆನ್ನನ್ನ ಮಾಡ್ಕೊಂತೀನಿ ಅಂದಾಳಂತಲ್ಲ ಅದೇ ಸಾಕು! ಅಲ್ಲ, ಅದು ಸಣ್ಣ ಮಾತೇನು? ನಮ್ಮ ಬಸ್ವಣ್ಣ ದೇವುರು ಮಾಡ ಆಟಕ್ಕ. ನಮ್ಮ ಕೈಯಾಗೇನಾದ?" ಎಂದು ಹೇಳುವಲ್ಲಿ ಧಾರ್ಮಿಕ ಸಾಮರಸ್ಯದ ಕಡೆ ಸಮಾಜ ವ್ಯವಸ್ಥೆ ದಾಪುಗಾಲು ಹಾಕುತ್ತಿರುವುದನ್ನು ಹಾಗೂ ಅದನ್ನು ಸಮಾಜ ಒಪ್ಪಿತ ಮೌಲ್ಯವಾಗಿಸಿಕೊಳ್ಳುವಲ್ಲಿ ಪ್ರಯತ್ನಿಸುವುದನ್ನು ಕಾಣಬಹುದು. ಇದರಿಂದ ದುರುಗನ ಮನಸ್ಥಿತಿ ಇಕ್ಕಟ್ಟಿಗೆ ಸಿಲುಕಿದರೂ ಬಸ್ಸಪ್ಪನ "ಯಾವ ಕಾಲಕ್ಕೆ ಏನು ನಡೀಬೇಕು ಅದು ನಡೀತಾದ! ಅಲ್ಲ ನೀನು ಜೀವ ಗಟ್ಟಿಗಿ ಹಿಡಕಂಡಿರು" ಎನ್ನುವಲ್ಲಿ ಶರಣರ ಕಾಲದ ಸಮಸಮಾಜದ ಬಸವಣ್ಣನ ಕನಸು ನನಸಾಗುವ ಪರಿಯನ್ನು ಕಾಣುತ್ತೇವೆ. ಶಿಕ್ಷಣ, ಉದ್ಯೋಗ, ಅಧಿಕಾರಗಳು ಸಂವಿಧಾನದ ಕೊಡುಗೆಯಾದ್ದರಿಂದ ಸಾಮಾಜಿಕ ವ್ಯವಸ್ಥೆಯು ಸಮಾನತೆಗೆ ತೆರೆದುಕೊಳ್ಳಬೇಕಾಗುತ್ತದೆ. ಅದನ್ನೇ ಕಥೆಗಾರರು ಈ ಪಾತ್ರಗಳ ಮೂಲಕ ಪ್ರತಿಪಾದಿಸುತ್ತಿದ್ದಾರೆ.

ಆದರೆ "ನೀನಿದ್ದಂಗ ನಿನ್ನ ಮಗ ಇಲ್ಲ. ದುರುಗಾ... ಅವುನು ಉಂಡ ಗಂಗಾಳದಾಗ ಉಚ್ಚೆ ಉಯ್ಯಾಕ ನಿಂತಾನ! ನಮ್ಮ ಮನೆತನಕ ಮಸಿ ಬಳ್ಯಾಕ ನಿಂತಾನ! ದುರುಗಾ... ನೀನು ಅವುನಿಗೆ ಹೇಳು. ನಿನ್ನ ಮಾರೆ ನೋಡಿ ಸುಮ್ನಿನಿ! ಇಲ್ಲಂದ್ರ...." ಎಂದು ಶಾಂತಗೌಡ ಆಕ್ರೋಶಭರಿತನಾಗಿ ನುಡಿವಾಗ ಶಾಂತಗೌಡನಿಗೆ ಆತ್ಮಪ್ರಜ್ಞೆ ಕಾಡುವುದಿಲ್ಲ. ಚೆನ್ನ ತನ್ನ ಮಗಳನ್ನು ಮದುವೆಯಾಗುತ್ತಾನೆಂಬ ವಿಷಯಕ್ಕೆ ಮನೆತನ, ಗೌರವದ ಮಾತುಗಳು ಮಾತ್ರವೇ ಶಾಂತಗೌಡನಿಂದ ಉದುರುತ್ತವೆ. ಆದರೆ ಅದೇ ದುರುಗನ ಹೆಂಡತಿ ಚೆಂದವ್ವಳನ್ನು ಶಾಂತಗೌಡ ಮುಟ್ಟಿದಾಗ ಮನೆತನ, ಗೌರವಕ್ಕೆ ಮಸಿ ಬಳಿದಂಗೆ ಆಗಿರಲಿಲ್ಲವೇಕೆ? ಎಂಬುದನ್ನು ಮರೆಯುತ್ತಾನೆ, ಶಾಂತಗೌಡ. ಅಂದರೆ ಉಳ್ಳವರು ಏನೂ ಬೇಕಾದರೂ ಮಾಡಿದರೂ ಈ ಸಮಾಜ ಒಪ್ಪಬೇಕು ಎಂಬುದು ಈ ಮಾತುಗಳಲ್ಲಿ ವ್ಯಕ್ತವಾಗುತ್ತದೆ.

ಸೂಗಪ್ಪ ಮಾಸ್ತರರು ಯಾವುದೇ ಜಾತಿಭೇದ, ಲಿಂಗಭೇದವಿಲ್ಲದ ಚೆನ್ನನನ್ನು ಓದುವಂತೆ ಪ್ರೇರೇಪಿಸಿದ್ದು ಕತೆಯಲ್ಲಿ ಮುಖ್ಯವಾಗುತ್ತದೆ. ಓದು ಬರೆಹ ಕಲಿತ ಚೆನ್ನನಿಗೆ ತಂದೆ ದುರುಗನ ಮಾತು ಭಯಮಿಶ್ರಿತ ಆತಂಕದಿಂದ ಕೂಡಿರುವಂತೆ ಕಾಣುತ್ತದೆ. ಮಗನ ಮೇಲಿನ ಮಮಕಾರಕ್ಕೆ ದುರುಗನು "ಇದೇನು ಬಸ್ವಣ್ಣಪ್ಪ ಕಾಲ ಏನಲೇ? ಚಪ್ಲಿ ಹೊಲಿವ ಕೈಯಿಗೆ ಲಿಂಗ ಬರದ್ಕಾ" ಎಂದು ಹೇಳುವಲ್ಲಿ ದುರುಗನಂತ ತಳಸಮುದಾಯದವರ ಮನಸಿನಲ್ಲಿ ಸಮಾನತೆಯನ್ನು ಆಶಿಸುತ್ತಿರುವುದನ್ನು ಕಾಣಬಹುದು.

ಶಾಂತಗೌಡ ಮತ್ತು ದುರುಗನ ನಡುವಿನ ಸಂಬಂಧವನ್ನು ಅರಿತಿದ್ದ ಸೂಗಪ್ಪ ಮಾಸ್ತರ್ ಶಾಂತಗೌಡನಿಗೆ ಹೇಳುವ ಮಾತುಗಳು ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತವೆ. "ದುರುಗ ನಿನ್ಗ ಹೇಣ್ತಿನ್ನ ಕೊಟ್ಟು ನುಂಗಿಕೊಂಡಿದ್ದ! ಅವುನು ಬೆಳೆಸಿದ್ದ ಗಿಡಗಳನ್ನು ಕಡುದು ನೀನು ಮನೆ ತುಂಬ ಬಂಡಿ, ಗಳೇವುದ ಸಾಮಾನು ತುಂಬಿಕೊಂಡಿ. ಆಗ ಅವನು ಅನುಭವಿಸಿದ ನೋವು ಸಣ್ಣದಲ್ಲ! ನಿನ್ಗ ಏನನ್ನ, ಅದು ತಗುಲಿತೇನು? ಸಾವಿರಾರು ಸಲ ನಿನ್ನನ್ನ ಹೆಗಲ ಮ್ಯಾಲ ಹೊತಗೊಂಡು ತುಂಗಮ್ಮನ್ನ ದಾಟ್ಯಾನ. ಛೇ... ಅವುನು ನಿನ್ಗ ಮಾಡಿದ್ದು ಬಾಳಾದ! ಅಂಥವನು, ಒಬ್ಬ ದುಡಿವ ಮನುಷ್ಯ ನಿನ್ಗ ಸಿಕ್ಕನಂತ ಈ ಮನೆಯ ವತನ ಕಮ್ಮಗ ನಡದಾದ!" ಎಂಬ ಮಾತುಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಶ್ರಮಿಕ ವರ್ಗದ ಮಹತ್ವ ಮತ್ತು ಅವರಿಗಾದ ಅನ್ಯಾಯಗಳನ್ನು ಎತ್ತಿಹಿಡಿದಿದ್ದಾರೆ, ಕಥೆಗಾರರು.

ಶಾಂತಗೌಡನ ಮನೆಯ ಏಳ್ಗೆಗೆ ತನ್ನ ರಕ್ತವನ್ನೇ ಬಸಿಯುತ್ತಿದ್ದ ದುರುಗ ತನ್ನ ಮಗನ ಕಾರಣಕ್ಕೆ ಗೌಡನ ಎದುರು ನಿಲ್ಲಲು ಭಯಭೀತನಾಗುತ್ತಾನೆ. ಆದರೆ ಅದು ಕೇವಲ ಕ್ಷಣಿಕ ಎಂಬುದು ದುರುಗನ ಮಾತುಗಳಲ್ಲೇ ಕಂಡುಬರುತ್ತದೆ. ದುರುಗನ್ನು

ಏನೂ ಮಾಡಲು ಸಾಧ್ಯವಾಗದ ಶಾಂತಗೌಡ, ಸೂಗಪ್ಪ ಮಾಸ್ತರರು ನೀಡಿದ ಸಲಹೆಗೂ ತೃಪ್ತಿಗೊಳ್ಳದೆ 'ಚೆನ್ನನನ್ನ ಸಾಲಿಗೆ ಹಾಕಿಸಿದ್ದೇ ತಪ್ಪಾಯ್ತು. ನಾನು ಆ ಹೊತ್ತಿನಲ್ಲಿ ಬ್ಯಾಡ ಅಂದಿದ್ರ...... ಇವತ್ತು ಇಂಥ ಗಂಡಾಂತರ ತರುತ್ತಿದ್ದಿಲ್ಲ. ಮತ್ತೆ ಅವುನು ಇವುತ್ತು ದುರುಗನಂಗ ನನ್ನ ಮನ್ಯಾಗ ದುಡುಕಂಡು ನಾನಾಕಿದ ಕೂಳು ತಿನ್ಕಂಡು ಬಿದ್ದರ್ತಿದ್ದ, ನಾಯಿ ಬಿದ್ದಂಗ! ಹುಡುಗ ಬುದ್ದಿವಂತ ಆಗ್ತಾನ, ಓದ್ಲಿ ಬುಡು, ಚೆನ್ನ ಓದಿದ್ರ ನಾಳೆ ನಿನ್ನ ಉಪಯೋಗಕ್ಕೆ ಬರ್ತಾನ ಅಂದ ಸೂಗಪ್ಪ ತಾತ! ಈಗ...? ಬಂದ್ನೋಡು ಕುತ್ತಿಗ್ಗೆ! ಸೂಳೆ ಮಗ! ಬೂದೆಣ್ಣ ಅಂದುದ್ದೇ ಕರೆವು. ಈ ಕುಲನ್ನ ಎಲ್ಲಿಡಬೇಕು ಅಲ್ಲೇ ಇಡಬೇಕು ಅಂತ'' ಎಂಬ ಶಾಂತಗೌಡನ ಮಾತುಗಳು ಸಾಮಾಜಿಕ ವ್ಯವಸ್ಥೆಯ ಹುಳುಕನ್ನು ಎತ್ತಿಹಿಡಿಯುತ್ತವೆ. ತಳವರ್ಗದವರು ಉತ್ತಮ ಬದುಕು ಕಟ್ಟಿಕೊಳ್ಳುವುದನ್ನು ಮೇಲ್ವರ್ಗದರು ಸಹಿಸಿಕೊಳ್ಳುವುದಿಲ್ಲ ಎಂಬುದನ್ನು ಇದು ಸ್ಪಷ್ಟಪಡಿಸುತ್ತವೆ. ಆದರೆ ವಿಪರ್ಯಾಸವೆಂದರೆ ಶಾಂತಗೌಡ ಮತ್ತು ಜೀತದಾಳು ದುರುಗರ ನಡುವೆ ಇರುವಂತಹ ಬಾಂಧವ್ಯ ಈ ಮೇಲಿನ ನಿಲುವಿಗೆ ವಿರುದ್ಧವಾಗಿದೆ. ಏಕೆಂದರೆ, ನನ್ಗೂ ತಿಳಿವಲ್ದಂಗಾಗ್ಯಾದ ದುರುಗ, ನಿನ್ನ ಮಗನ್ನ ಆವಾಗ ನೆನಸಿಗಂಡ್ರ ಮುದ್ದು ಬರ್ತಿತ್ತು. ಈಗ ನೆನಪಾಗಿ ಕಾಡ್ತಾನ. ನನ್ನ ಮನೆತನಕ್ಕ ಮಸಿ ಬಳ್ಯಾಕ ನಿಂತುಬುಟ್ಟಾನ! ದುರುಗಾ, ಮಸಿ ಬಳ್ಯಾಕ!'' ಎಂದು ನುಡಿಯುವ ಶಾಂತಗೌಡನ ಮಾತುಗಳಲ್ಲಿ ಸಾಮಾಜಿಕ ಸಾಮರಸ್ಯ ಎದ್ದು ಕಾಣುತ್ತದೆ. ಹಾಗೆಯೇ ''ನಮ್ಮಪ್ಪ ದುಡುದಾನ, ನಮ್ಮವ್ವ ದುಡುದಾಳ, ಮಾರಿಕೊಂಡಾರ ಅವರಿಬ್ಬರು ಶಾಂತಗೌಡುಗ. ಮಾರಿಕೊಂಡದ್ದು ನೋಡಿದರೆ ಅದರ ರೊಕ್ಕ ಶಾಂತಗೌಡನ ಆಸ್ತಿಯನ್ನೆಲ್ಲ ಮಾರಿದರೆ ಸಾಲದು ನಮ್ಗ ತೀರ್‌ಸಾಕ ಅಂದನಂತ! ವ್ಹಾರೇ ಮಗ್ನೆ... ಚೆನ್ನ' ಎಂದು ನುಡಿಯುವ ಮಾತುಗಳಲ್ಲಿ ಆಕ್ರೋಶವಿದೆ.

ಹೀಗೆ ಪ್ರತಿಭಟನಾತ್ಮಕ ಸಂಘರ್ಷ ಮತ್ತು ಸಾತ್ವಿಕ ಸಿಟ್ಟನ್ನು ಇಡೀ ಕಥೆಯಲ್ಲಿ ತರುವ ಮೂಲಕ ಅಮರೇಶ ನುಗಡೋಣಿ ಅವರು ಸಮಕಾಲೀನ ಸಾಮಾಜಿಕ ವ್ಯವಸ್ಥೆಯು ಬದಲಾಗುತ್ತಿರುವುದರ ಕುರುಹನ್ನು ಅನಾವರಣಗೊಳಿಸಿದ್ದಾರೆ. ಹಾಗೂ ತಮ್ಮ ಸುತ್ತಮುತ್ತಲಿನ ಸಾಮಾಜಿಕ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗ್ರಹಿಸಿಕೊಂಡು ಈ ಕಥೆಯಲ್ಲಿ ಪರಿವರ್ತನೆಯನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಿರುವ ಸಾಮಾಜಿಕತೆಯನ್ನು ಕಂಡರಿಸಿದ್ದಾರೆ. ದಲಿತ ಮತ್ತು ಲಿಂಗಾಯತ ಸಮುದಾಯದ ಸಾಮರಸ್ಯವನ್ನು ದುರುಗಾ ಮತ್ತು ಶಾಂತಗೌಡ ಪಾತ್ರಗಳ ಮೂಲಕ ಕಟ್ಟಿಕೊಡುತ್ತಲೇ ಚೆನ್ನ ಮತ್ತು ಅಕ್ಕಮಹಾದೇವಿ ಪಾತ್ರಗಳ ಮೂಲಕ ಜಾತಿ ವಿನಾಶದಂತ ಕ್ರಾಂತಿಯನ್ನು ಆಹ್ವಾನಿಸಿರುವುದು ಕಥೆಯನ್ನು ಗಟ್ಟಿಗೊಳಿಸುತ್ತದೆ. ಶೋಷಣೆ, ದಬ್ಬಾಳಿಕೆಯ ಮೇಲ್ವರ್ಗದವರ ಮನಸ್ಥಿತಿಗಳು ಇಂದು ದೂರಾಗುತ್ತಿದ್ದರೂ ಅವು ಸಾಮಾಜಿಕವಾಗಿ ವೇಗವಾಗಿ ಸ್ವೀಕೃತವಾಗದೆ ಇರುವುದು ಈ ನೆಲದ ಸಾಂಸ್ಕೃತಿಕ

ವಿಪರ್ಯಾಸವಾಗಿದೆಯೆಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು:**

1. ಅಮರೇಶ ನುಗಡೋಣಿ. (2016). ತಮಂಧದ ಕೇಡು. ಪಲ್ಲವ ಪ್ರಕಾಶನ. ಚೆನ್ನಪಟ್ಟಣ.
2. ಶಾಮರಾಯ ತ. ಸು. (2017). ಕನ್ನಡ ಸಾಹಿತ್ಯ ಚರಿತ್ರೆ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.